**ವ್ಯಾಖ್ಯಾನ:**

# ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು

**ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು**

**ಆವ ಬಗೆ ಕಾರ್ಯತತಿ ಸಿದ್ಧಿಗೊಳಿಸಿ**

**ಮೋದದಿಂ ಸಲಿಸುವ ಮನದಿಷ್ಟವ**

**ಸಾಧು ಜನರೆಲ್ಲ ಕೇಳಿ ಸಕಲ ಸುರರಿಂಗೆ**

**ಮಾಧವನೇ ನೇಮಿಸಿಪ್ಪ ಈ ಅಧಿಕಾರವ**

**ಆದರದಿಂದ ಅವರವರೊಳು ನಿಂದು**

**ಭೇದಗೊಳಿಸದೆ ಕಾರ್ಯಮಾಳ್ಪ ಪುರಂದರ ವಿಠಲ**

ಶ್ರೀ ಪುರಂದರ ದಾಸರು ಒಂದು ವಿಶಿಷ್ಟ ವಿಷಯವನ್ನು ಈ ಪುಟ್ಟ ಉಗಾಭೋಗದಲ್ಲಿ ತಿಳಿಸುತ್ತಿದ್ದಾರೆ.

ಅದೇನೆಂದರೆ,

ಶ್ರೀ ಹರಿ ತಾನು ಸರ್ವೋತ್ತಮ, ಸರ್ವಶಕ್ತ, ಸಕಲ ಕಾರ್ಯಮಾಳ್ಪ ಸಾಮರ್ಥ್ಯವುಳ್ಳವನಾಗಿದ್ದರೂ, ದೇವತೆಗಳಿಗೂ ತತ್ವಾಭಿಮಾನಿತ್ವ, ವಿವಿಧ ಪದವಿಗಳು, ಅಧಿಕಾರ ಮತ್ತು ಶಾಪಾನುಗ್ರಹ ಶಕ್ತಿ ಎಲ್ಲವನ್ನು ಕೊಟ್ಟಿದ್ದಾನೆ.

ಇದು ಅವನ ಕಾರುಣ್ಯ.

ಭಾಗವತ ದ್ವಿತಿಯ ಸ್ಕಂಧದಲ್ಲಿ ಶುಕಾಚಾರ್ಯರು, ಯಾವ ಯಾವ ಇಷ್ಟಾರ್ಥ ಪೂರೈಸಿಕೊಳ್ಳಲು ಯಾವ ಯಾವ ದೇವತೆಗಳನ್ನು ಆರಾಧಿಸಬೇಕು ಎಂಬುದನ್ನು ವಿಸ್ತಾರವಾಗಿ ತಿಳಿಸುತ್ತಾರೆ.

ಉದಾ:-- ಬ್ರಹ್ಮ ವರ್ಚಸ್ಸು ಬೇಕಾದರೆ ಬೃಹಸ್ಪತಿಯನ್ನು, ಸಂಪತ್ತು ಬಯಸುವವರು ಲಕ್ಷ್ಮೀದೇವಿಯನ್ನು, ವೀರನಾಗಲು ರುದ್ರದೇವರನ್ನು ಆರಾಧಿಸಬೇಕು, ಮುಂತಾಗಿ.

ಅದರಂತೆ ಸಕಲ ಕಾರ್ಯ ನಿರ್ವಿಘ್ನತೆಗಾಗಿ ಗಜಾನನ್ನು ಭಜಿಸಬೇಕೆಂದು ತಿಳಿಸುತ್ತಾರೆ.

**“ಪಾಶಾದಂತಾಂಕುಶಾಭಯೇ ಬಿಭ್ರುದ್ವ್ಯೇಯೋ ವಿಘ್ನಹರ:"(ತಂತ್ರಸಾರ ಸಂಗ್ರಹ)**

ಈ ರೀತಿ ದೇವತೆಗಳಿಗೆ ಅಧಿಕಾರ ಕೊಟ್ಟದ್ದಷ್ಟೇ ಅಲ್ಲ, ಅವತಾರಗಳಲ್ಲಿ ಅವರ ಆರಾಧನೆ ಮಾಡಿ ತೋರಿಸುತ್ತಾನೆ ಕೂಡ.

ಏಕೆಂದರೆ,

ಶ್ರೀ ವ್ಯಾಸರಾಜರು ಗೀತಾಸಾರದಲ್ಲಿ ಶ್ರೀಕೃಷ್ಣನ ಮಾತುಗಳಲ್ಲಿ ತಿಳಿಸುವಂತೆ

**"ಜನರೆಲ್ಲ ಮಾಳ್ಪರೊ ನಿನನೋಡಿ ಮತ್ತೆನ್ನ ನೋಡಿ"**

ಮರ್ತ್ಯ ಶಿಕ್ಷಣಕ್ಕಾಗಿ ತಾನು ಆಚರಣೆ ಮಾಡಿ ತೋರಿಸುತ್ತಾನೆ.

ಶ್ರೀರಾಮಚಂದ್ರನಾಗಿ ಅವತಾರ ಮಾಡಿದಾಗ, ಸಮುದ್ರಕ್ಕೆ ಸೇತುವೆ ನಿರ್ಮಾಣದ ಕಾರ್ಯ ನಿರ್ವಿಘ್ನವಾಗಲೆಂದು ಗಣಪತಿಯನ್ನು ಪೂಜಿಸಿದನು.

ಶ್ರೀಕೃಷ್ಣನಾಗಿದ್ದಾಗ, ಧರ್ಮರಾಯನಿಂದ ಗಜಾನನ ಪೂಜೆ ಮಾಡಿಸಿದನು.

ಇದಲ್ಲವೆ ಸರ್ವಶಕ್ತನ ಕಾರುಣ್ಯ.

**"ವಕ್ರತುಂಡನೆ ನಿನ್ನೊಳೆಂತುಂಟೋ ಈಶನುಗ್ರಹವು"( ಹರಿಕಥಾಮೃತಸಾರ)**

ಅವರೊಳಗೆ ನಿಂದು ಭೇದ ಗೊಳಿಸದೇ ಕಾರ್ಯಮಾಳ್ಪ ಪುರಂದರ ವಿಟ್ಠಲ

ಅಂದರೆ,

ಈ ದೇವತೆಗಳ ಆರಾಧನೆಯನ್ನು ಮಾಡಬೇಕಾದರೆ ಒಂದು ತಿಳುವಳಿಕೆಯನ್ನು ಹೊಂದಿರಬೇಕೆಂದು ದಾಸರು ವಿಶೇಷವಾಗಿ ತಿಳಿಸುತ್ತಾರೆ.

ಇವರೆಲ್ಲ ಅಸ್ವತಂತ್ರರು ಇವರಲ್ಲಿ ನಿಂತು ಶ್ರೀಹರಿಯೇ ಆಯಾ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುತ್ತಾನೆ ಎಂದು ಚಿಂತಿಸಬೇಕು.

ಜಗನ್ನಾಥದಾಸರು ಹರಿಕಥಾಮೃತ ಸಾರದ ನಾಮಸ್ಮರಣ ಸಂಧಿಯಲ್ಲಿ ಇದನ್ನು ಚನ್ನಾಗಿ ತಿಳಿಸುತ್ತಾರೆ.

ಅನಲ ಸೋಮಾರ್ಕೇಂದು ತಾರಾವನಿ ಸುರಾಪಗ ಮುಖ್ಯ ತೀರ್ಥಗಳನಿಲ ಗಗನ ಮನಾದಿ ಇಂದ್ರಿಯಗಳಿಗೆ ಅಭಿಮಾನಿ/
ಎನಿಪ ಸುರರು ವಿಪಶ್ಚಿತರು ಸನ್ಮನದಿ ಭಜಿಸದೆ ಇಪ್ಪರನ ಪಾವನವ ಮಾಡರು ತಮ್ಮ ಪೂಜೆಯ ಮಾಡಿದರು ಸರಿಯೇ//

ಅಗ್ನಿ, ಶಿವ, ಸೂರ್ಯಾದಿ ದೇವತೆಗಳು ತಮ್ಮೊಳಗೆ ಶ್ರೀಹರಿಯು ಸನ್ನಾಹಿತನಾಗಿರುವನು ಎಂದು ತಿಳಿಯದೆ, ತಮ್ಮನ್ನು ಪೂಜೆ ಮಾಡುವವರನ್ನು ಎಂದೂ ಉದ್ಧಾರ ಮಾಡಲಾರರು ಎಂದು ಭಾವ.

ಆಧಿಕಾರಿಕ ದೇವತೆಗಳ ಆರಾಧನೆ ಅವಶ್ಯಕವಾದದ್ದು, ಆ ಅಧಿಕಾರ ಕೊಟ್ಟು ಒಳಗಿದ್ದು ಪ್ರೇರಿಸುವವ ಲಕ್ಷ್ಮಿಗೂ ಧವನಾದ ಮಾಧವ ಎಂದು ತಿಳಿಯುವುದು ಇನ್ನೂ ಹೆಚ್ಚು ಅವಶ್ಯಕವಾದದ್ದು ಎನ್ನುವುದು ಈ ಉಗಾಭೋಗದ ಆಂತರ್ಯ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ